## ಸಾರ್ಥಕ ಕೊಡುಗೆ




ಹುಟ್ಟಿದವರೆಲ್ಲರೂ ಒಂದಿಲ್ಲೊಂದು ದಿನ ಸಾಯಲೇ ಬೇಕು. ಬದುಕಿರುವಾಗ ಸಮಾಜಕ್ಕೆ ಏನಾದರೊಂದು ನೀಡಿ ಶಾಶ್ವತ ಸ್ಥಾನ ಗಳಿಸುವಂತಾದರೆ ಅಂತಹವರ ಬಾಳು ಧನ್ಯ.

ಮೃತ ದೇಹವನ್ನು ಹೂಳುವ ಅಥವಾ ಸುಡುವ ಪದ್ಧತಿ ನಮ್ಮಲ್ಲಿ ಇದೆ. ಮಂಗಳೂರಿನ ಬೋಳೂರಿನ ಬಯಲು ಚಿತಾಗಾರಕ್ಕೆ 9 ದಶಕಗಳ ಹಿಂದೆ ಶೆಡ್ ನಿರ್ಮಿಸಿದ್ದು ಇನ್ನೂ ಸುಸ್ಥಿತಿಯಲ್ಲಿದೆ. 16 ಮಂದಿ ಗುಜರಾತಿ ಮತ್ತು ಮುಲ್ತಾನಿ ಮೂಲದ ಜನ ವಂತಿಗೆಯನ್ನು ಸಂಗ್ರಹಿಸಿದಿ ಇದನ್ನು ನಿರ್ಮಿಸಿದ್ದಾರೆ. ಅದಕ್ಕಾಗಿ ಕನಿಷ್ಠ 11 ರೂಪಾಯಿಂದ ಗರಿಷ್ಠ 326 ರೂಪಾಯಿ ದೇಣಿಗೆ ಸಂಗ್ರಹಿಸಿದ್ದಾಗಿ ದಾಖಲೆ ಇದೆ. ಈ ಚಿತಾಗಾರ ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದು ಏಕಕಾಲಕ್ಕೆ 4 ಶವಗಳನ್ನು ಸುಡುವ ಸಾಮರ್ಥ್ಯ ಹೊಂದಿದೆ. ಇತ್ತೀಚೆಗೆ ವಿದ್ಯುತ್ ಚಿತಾಗಾರವನ್ನು ನಿರ್ಮಿಸಲಾಗಿದ್ದು, ಎರಡೂ ಚಿತಾಗಾರಗಳೂ ಕಾರ್ಯನಿರ್ವಹಿಸುತ್ತಿವೆ.

—ರಾಜೇಂದ್ರ ಎನ್. ಆಚಾರ್ಯ



## ಲಿಲ್ಲಿ ಹೂವು

ಈ ಚಿತ್ರದಲ್ಲಿ ಕಾಣುತ್ತಿರುವ ಲಿಲ್ಲಿ ಹೂವಿನ ವೈಜ್ಞಾನಿಕ ಹೆಸರು ಲಿಲಿಯಮ್. ಲಿಲ್ಲಿಗಳ ಪ್ರಭೇದಗಳು ಜಪಾನ್, ಅಮೆರಿಕ, ಯುರೋಪ, ಇಂಡೋಚೈನಾ ಮತ್ತು ಫಿಲಿಪೈನ್ಸ್‌ವರೆಗೆ ವ್ಯಾಪಿಸಿದೆ. ಲಿಲ್ಲಿಗಳನ್ನು ಸಾಮಾನ್ಯವಾಗಿ ನಾವು ಬಿಳಿ, ಕಿತ್ತಳೆ, ಹಳದಿ, ಕೆಂಪು ಹಾಗು ನೇರಳೆ ಬಣ್ಣಗಳಲ್ಲಿ ನೋಡಬಹುದಾಗಿದೆ. ಲಿಲಿಯಮ್ ಎಂದರೆ ಲ್ಯಾಟಿನ್ ಭಾಷೆ ಯಲ್ಲಿಶುದ್ಧತೆ, ಪವಿತ್ರತೆ, ಸುಂದರತೆ ಎಂದರ್ಥ. ಒಟ್ಟಿನಲ್ಲಿ ಲಿಲ್ಲಿ ಹೂವು ನಮ್ಮ ಅಮ್ಮನ ಮನೆಯ ಹೂದೋಟದಲ್ಲಿ ಅರಳಿದಾಗ ಸುಂದರತೆಗೆ ಹೆಚ್ಚಿನ ಮೆರುಗನ್ನು ನೀಡುವುದಂತೂ ನಿಜ.

—ಸಂಜ್ಞಾ ಪಿ ಭಟ್ಟ, ಶಿರಸಿ.

## ಮನಸೆಳೆವ ಕೆಂಪು ಸುಂದರಿ



ಮೈತುಂಬ ಕೆಂಪು ಹೂವುಗಳನ್ನು ಮುಡಿದು ಹಸಿರನ್ನೆಲ್ಲ ಕಳಚಿಕೊಂಡು ವಯ್ಯಾರದಿಂದ ರಸ್ತೆ ಬದಿ ನಿಂತ ಬೂರುಗದ ಮರಗಳು ಮನ ಸೆಳೆಯುತ್ತವೆ. ಬಾಂಬಿಕೇಸಿ ಕುಟುಂಬಕ್ಕೆ ಸೇರಿದ ಬೂರುಗದಲ್ಲಿ ಕೆಂಪು ಬೂರುಗ, ಬಿಳಿ ಬೂರುಗ ಮತ್ತು ಹಳದಿ ಬೂರುಗ ಎಂಬ ಜಾತಿಗಳಿವೆ. ಕೆಂಪು ಬೂರುಗದ ವೈಜ್ಞಾನಿಕ ಹೆಸರು ಸಾಲ್ಮೇಲಿಯಾ ಮಲಬೆರಿಕಾ.

30 ಮೀಟರ ಎತ್ತರದವರೆಗೆ ಬೆಳೆಯುವ ಈ ಮರ ಚಿಕ್ಕದಿರುವಾಗ ಕಾಂಡದ ಮೇಲೆ ಮೊನಚಾದ ಮುಳ್ಳುಗಳಿರುತ್ತವೆ. ಹೂ ಬಿಡುವುದಕ್ಕೆ ಮುನ್ನ ಎಲೆಗಳು ಉದುರುತ್ತವೆ. ಜನವರಿ, ಫೆಬ್ರುವರಿ ತಿಂಗಳಲ್ಲಿ ಹೂ ಬಿಟ್ಟು ಮಾರ್ಚ್‌ನಿಂ ಮೇ ತನಕ ಕಾಯಿಬಿಟ್ಟು ಬಲಿಯುತ್ತವೆ. ಬಲಿತ ಕಾಯಿಗಳು ಬಿರಿದ ಮೇಲೆ ಒಳಗಿನ ಹತ್ತಿ ಹೊರ ಹಾರುತ್ತದೆ.

ಬೂರುಗದ ಹತ್ತಿಯನ್ನು ಹಾಸಿಗೆ, ತಲೆದಿಂಬಿಗೆ ಬಳಸುತ್ತಾರೆ ಮರವನ್ನು ಬೆಂಕಿ ಕಡ್ಡಿ ಹಾಗೂ ಬೆಂಕಿ ಪೆಟ್ಟಿಗೆ ತಯಾರಿಕೆಯಲ್ಲಿ ಬಳಸುವುದುಂಟು. ತೊಗಟೆಯಿಂದ ಪಡೆದ ಅಂಟನ್ನು ಮೊಸರಿನೊಡನೆ ಸೇವಿಸಿ ಅತಿಸಾರ, ಆಮಶಂಕೆಯಿಂದ ಪರಿಹಾರ ಪಡೆಯಬಹುದು.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು.